# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ** | : | **1241** |
| **ಉತ್ತರಿಸಬೇಕಾದ ದಿನಾಂಕ** | : | **21.12.2018** |

| | | |
|---|---|---|
| ಅ | ಕಲಬುರಗಿ ಮತ್ತು ಯಾದಗಿರ ಸಹಕಾರಿ ಬ್ಯಾಂಕ (ಡಿ.ಸಿ.ಸಿ)ನಲ್ಲಿ ಸಾಲ ಮನ್ನಾ ವಿಷಯದಲ್ಲಿ ಅವ್ಯವಹಾರ ನಡೆದಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಕಲಬುರಗಿ ಮತ್ತು ಯಾದಗಿರ ಸಹಕಾರಿ ಬ್ಯಾಂಕ ನಿ., ಕಲಬುರಗಿ ಇಲ್ಲಿ 2017–18ನೇ ಸಾಲಿನ ಸಾಲ ಮನ್ನಾ ಹಣವನ್ನು ರೈತರಿಗೆ ವಿತರಿಸದೆ ಪುನ: ಸಾಲ ನವಿಕರಿಸುತ್ತಿರುವ ಬಗ್ಗೆ ದೂರು ಬಂದಿರುತ್ತದೆ. |
| ಆ | ಅವ್ಯವಹಾರದ ಬಗ್ಗೆ ಸಮಗ್ರ ತನಿಖೆ ನಡೆಸಲಾಗಿದೆಯೇ: | ದೂರಿನ ಅಂಶಗಳ ಕುರಿತು ವಿಚಾರಣೆ ನಡೆಸಲು ಸಹಕಾರ ಸಂಘಗಳ ಉಪ ನಿಬಂಧಕರು ಯಾದಗಿರ ಇವರಿಗೆ ಸೂಚಿಸಲಾಗಿರುತ್ತದೆ.<br><br>ಸದರಿ ದೂರಿನನ್ವಯ ದಿ:19–11–2018ರಂದು ದೂರಿನ ಕುರಿತು ವಿಚಾರಣೆ ನಿಗದಿಪಡಿಸಲಾಗಿದ್ದು, ಅದರನ್ವಯ ವಿಚಾರಣೆಗೆ ದೂರುದಾರರು ಗೈರು ಹಾಜರಾಗಿರುತ್ತಾರೆ.<br><br>ದಿನಾಂಕ:30–11–2018ರಂದು ನಡೆದ ವಿಚಾರಣೆಯಲ್ಲಿ ದೂರುದಾರರು ಹಾಜರಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ ಕಲಬುರಗಿ ಇವರು ಹಾಜರಿದ್ದು ಸದರಿ ದೂರಿನ ಕುರಿತು ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದ್ದರನ್ವಯ ದಿನಾಂಕ:20–12–2018ರಂದು ವಿಚಾರಣೆಯನ್ನು ಮುಂದೂಡಲಾಗಿರುತ್ತದೆ. |
| ಇ | ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೇ: (ವಿವರ ನೀಡುವುದು.) | ಸದರಿ ದೂರು ಅರ್ಜಿ ವಿಚಾರಣೆ ಹಂತದಲ್ಲಿರುತ್ತದೆ. ವಿಚಾರಣೆ ಪೂರ್ಣಗೊಂಡ ನಂತರ ನಿಯಮಾನುಸಾರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. |
| ಈ | ಡಿ.ಸಿ.ಸಿ ಬ್ಯಾಂಕ್ ಸಿಬ್ಬಂದಿ ಸಾಲ ಮನ್ನಾ ಪಾವತಿಯಲ್ಲಿ ರೈತರಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು.) | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

ಸಿಓ 315 ಸಿಎಲ್‌ಎಸ್ 2018

**(ಬಂಡೆಪ್ಪ ಕಾಶೆಂಪೂರ)**

ಸಹಕಾರ ಸಚಿವರು